**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 49/2024**

**ಚಾ.ಸಾ. :-1**
**ಪ್ರಾ.ಸಾ. :-1**

| | |
|---|---|
| ಹೆಸರು | : ಲೋಕೇಶ್.ವಿ.ಕೆ. |
| ತಂದೆಯ ಹೆಸರು | : ಲೇಟ್ ಕಾಳೇಗೌಡ |
| ವಯಸ್ಸು | : 49 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ವಡ್ಡರಹಳ್ಳಿ ಗ್ರಾಮ, ಪಾಂಡವಪುರ |

**ಪ್ರಮಾಣೀಕರಿಸಲಾದ ದಿನಾಂಕಃ- 19.01.2026**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ಮೃತ ಕಾಳೇಗೌಡರು ನಮ್ಮ ಗ್ರಾಮಸ್ಥರು. ದಿನಾಂಕಃ 21.01.2024 ರಂದು ಬೆಳಿಗ್ಗೆ ಸುಮಾರು 7.00 ಗಂಟೆ ಸಮಯದಲ್ಲಿ ನಾನು ಹಾಗೂ ಸುಮಾರು 10-15 ಜನ ಆರತಿ ಉಕ್ಕಡದಲ್ಲಿ ಟೀ ಅಂಗಡಿಯ ಬಳಿ ಕುಳಿತಿದ್ದೆವು. ಚಾ.ಸಾ-2 ರವರು ಊರಿನಲ್ಲಿದ್ದರು. ಆ ಸಮಯದಲ್ಲಿ ಮೃತ ಕಾಳೇಗೌಡರು ಕೆ.ಆರ್.ಪೇಟೆ ಕಡೆಯಿಂದ ಶ್ರೀರಂಗಪಟ್ಟಣಕ್ಕೆ ಬರುವ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದರು. ಆ ಸಮಯದಲ್ಲಿ ಅವರ ಹಿಂದಿನಿಂದ ಬಂದಂತಹ ಟೆಂಪೋದಂತಹ ವಾಹನ ಸದರಿ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿರುತ್ತದೆ. ಶಬ್ದ ಬಂದ ಸಮಯದಲ್ಲಿ ನಾವೆಲ್ಲರೂ ಸ್ಥಳಕ್ಕೆ ಹೋಗಿ ನೋಡಿರುತ್ತೇವೆ. ಆಗ ಕಾಳೇಗೌಡರು ಸ್ಥಳದಲ್ಲಿಯೇ ಮೃತಪಟ್ಟಿದ್ದರು.

ಕಾಳೇಗೌಡರು 20-30 ಕಿ.ಮೀ.ವೇಗದಲ್ಲಿ ಹೋಗುತ್ತಿದ್ದರು. ಟೆಂಪೋ 40-50 ಕಿ.ಮೀ.ವೇಗದಲ್ಲಿ ಹೋಗುತ್ತಿತ್ತು. ಯಾರ ತಪ್ಪಿನಿಂದ ಅಪಘಾತವಾಗಿದೆ ಎಂದು ಹೇಳಲು ಆಗುವುದಿಲ್ಲ. ಅಪಘಾತದ ಬಗ್ಗೆ ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿಯ ಸಹಿ

ಇರುವ ಒಂದು ದಾಖಲೆಯು ದೂರಾಗಿದ್ದು ಅದನ್ನು ಈಗ ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರ್ತಿಸಲಾಯಿತು.

ಸಾಕ್ಷಿಯ ಸಹಿ ಇರುವ ಇನ್ನೊಂದು ದಾಖಲೆಯು ಸ್ಥಳ ಮಹಜರ್ ಆಗಿದ್ದು, ಅದನ್ನು ಈಗ ನಿಪಿ-2 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರ್ತಿಸಲಾಯಿತು. ಮಹಜರ್ ಸಮಯದಲ್ಲಿ ತೆಗೆದ 2 ಫೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-3 ಎಂದು ಗುರುತಿಸಲಾಯಿತು.

*(ಈ ಹಂತದಲ್ಲಿ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ, ಸ.ಸ.ಅ. ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)*

**ಪಾಟೀ ಸವಾಲು : ಮಾನ್ಯ ಸ.ಸ.ಅ.ರವರಿಂದ :**

ದೂರಿನಲ್ಲಿ ಮಾಕ್ಸಿ ಕ್ಯಾಬ್ ಚಾಲಕ ಅತಿವೇಗ, ಅಜಾಗರೂಕತೆಯಿಂದ ಚಾಲನೆ ಮಾಡಿ ನಿಧಾನವಾಗಿ ಹೋಗುತ್ತಿದ್ದ ಕಾಳೇಗೌಡರಿಗೆ ಡಿಕ್ಕಿಪಡಿಸಿರುತ್ತದೆ ಎಂದು ಬರೆದಿರುತ್ತದೆ ಎಂದರೆ ಸರಿ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ನಾನು 6ನೇ ತರಗತಿಯವರೆಗೆ ಓದಿರುತ್ತೇನೆ. ಕನ್ನಡ ಸ್ವಲ್ಪ ಓದಲು ಬರುತ್ತದೆ. ನಮ್ಮ ಊರಿನಿಂದ ಅಪಘಾತವಾದ ಸ್ಥಳ ಸುಮಾರು 7-8 ಕಿ.ಮೀ.ಇರಬಹುದು ಎಂದರೆ ಇರಬಹುದು. ಆ ದಿನ ಅಪಘಾತವಾದ ಸ್ಥಳಕ್ಕೆ ಏಕೆ ಹೋಗಿರುತ್ತೀರಾ ಎಂದರೆ ಸಾಕ್ಷಿ ಟೀ ಕುಡಿಯುವ ಸಲುವಾಗಿ ಹೋಗಿದ್ದೆ ಎನ್ನುತ್ತಾರೆ. ನಮ್ಮ ಊರಿನಲ್ಲಿಯೇ 2-3 ಟೀ ಅಂಗಡಿಗಳು ಇರುತ್ತವೆ ಎಂದರೆ ಸಾಕ್ಷಿ ನಾನು ಅಲ್ಲಿ ಟೀ ಕುಡಿಯುವುದಿಲ್ಲ ಎನ್ನುತ್ತಾರೆ.

ದೂರನ್ನು ಪೊಲೀಸ್ ಠಾಣೆಯಲ್ಲಿ ಟೈಪ್ ಮಾಡಿರುತ್ತಾರೆ. ದೂರಿನಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ಟೀ ಕ್ಯಾಂಟೀನ್ ಬಳಿ

ಕುಳಿತರೆ ಶ್ರೀರಂಗಪಟ್ಟಣ-ಕೆ.ಆರ್.ಪೇಟೆ ರಸ್ತೆಯಲ್ಲಿ ಹೋಗುವ ವಾಹನಗಳು ಕಾಣುವುದಿಲ್ಲ ಎಂದರೆ ಸರಿ, ಶಬ್ದ ಬಂದರೆ ಮಾತ್ರ ಗೊತ್ತಾಗುತ್ತದೆ ಎನ್ನುತ್ತಾರೆ. ನಿಪಿ-3ರಲ್ಲಿ ನಾನು ಕೈ ತೋರಿಸುತ್ತಿರುವ ಜಾಗ ಮುಖ್ಯ ರಸ್ತೆಯಿಂದ ಆರತಿ ಉಕ್ಕಡಕ್ಕೆ ತಿರುವು ತೆಗೆದುಕೊಳ್ಳುವ ಜಾಗ ಎಂದರೆ ಸರಿ.

ಕಾಳೇಗೌಡರಿಗೆ ಸುಮಾರು 60 ವರ್ಷ ಎಂದರೆ ಸರಿ. ಸದರಿಯವರಿಗೆ ವಾಹನ ಚಾಲನೆ ಮಾಡಲು ಬರುತ್ತಿರಲಿಲ್ಲ ಹಾಗೂ ಅವರು ಏಕಾಏಕಿ ಮುಖ್ಯ ರಸ್ತೆಗೆ ತಿರುವು ತೆಗೆದುಕೊಂಡ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿ. ವಾಹನಗಳ ನೋಂದಣಿ ಸಂಖ್ಯೆ ಗೊತ್ತಿಲ್ಲ. ಪೊಲೀಸರು ಜಾಗ ತೋರಿಸಲು ಹೇಳಿದ ಕಾರಣ ನಾನು ಜಾಗ ತೋರಿಸಿರುತ್ತೇನೆ ಎಂದರೆ ಸರಿ. ನನ್ನ ಮುಂದೆ ಬರವಣಿಗೆ ಮಾಡದಿದ್ದರೂ ಪೊಲೀಸರು ಸಹಿ ಮಾಡಲು ಹೇಳಿದ ಕಾರಣ ಸಹಿ ಮಾಡಿರುತ್ತೇನೆ. ಯಾರು ಯಾರು ಮಹಜರಿಗೆ ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಕಾಳೇಗೌಡರ ತಪ್ಪಿ ನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸಾಕ್ಷಿ ಚಿಕ್ಕ ವಾಹನದ ತಪ್ಪು ಕಾಣುವುದಿಲ್ಲ, ದೊಡ್ಡ ವಾಹನದ್ದೇ ತಪ್ಪು ಕಾಣುತ್ತದೆ ಎನ್ನುತ್ತಾರೆ. ಮೃತರ ಕುಟುಂಬಕ್ಕೆ ವಿಮೆ ಪರಿಹಾರ ಕೊಡಿಸುವ ಸಲುವಾಗಿ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ :</u> ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**